# ಕರ್ನಾಟಕ ಲೋಕಾಯುಕ್ತ

ಕಂಪ್ಲೆಂಟ್/ಉಪಲೋಕ್/ಬಿಜಿಎಂ/1344/2021
ಪಿ.ಓ.ಎ.ಆರ್.ಇ-5(ಮಂಡನಾಧಿಕಾರಿಗಳು)

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ ವೀಧಿ,
ಬೆಂಗಳೂರು_ದಿನಾಂಕ: 16/12/2021

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರ ಅನ್ವಯ ವರದಿ

**ವಿಷಯ:** 1) ಶ್ರೀ. ಮಹಮ್ಮದ್‌ಎಜಾಜ್ ಬಿನ್ ಬಿ.ಎ. ಅಬ್ದುಲ್ ರೆಹಮಾನ್, ಹಿರಿಯ ಮೋಟಾರು ವಾಹನ ನಿರೀಕ್ಷಕರು (ನಿವೃತ್ತ), ಜಳಕಿ ಆರ್.ಟಿ.ಓ. ಚೆಕ್‌ಪೋಸ್ಟ್, ವಿಜಯಪುರ ಜಿಲ್ಲೆ.

2) ಮುತ್ತುರಾಜ್ ಬಿನ್ ನಿಂಗಪ್ಪ, ಪ್ರಥಮ ದರ್ಜೆ ಸಹಾಯಕರು, ಜಳಕಿ ಆರ್.ಟಿ.ಓ. ಚೆಕ್‌ಪೋಸ್ಟ್, ವಿಜಯಪುರ ಜಿಲ್ಲೆ.

3) ಅಪ್ಪಾಸಾಹೇಬ್ ಬೋಜನಾಯಕ ಬಿನ್ ಹನುಮಂತ, ಸಿಪಾಯಿ ಜಳಕಿ ಆರ್.ಟಿ.ಓ. ಚೆಕ್‌ಪೋಸ್ಟ್, ವಿಜಯಪುರ ಜಿಲ್ಲೆ. (ಮೃತಪಟ್ಟಿರುತ್ತಾರೆ)

ಇವರು ಸರ್ಕಾರಿ ನೌಕರರಾಗಿ ಸರ್ಕಾರಿ ಕೆಲಸ ನಿರ್ವಹಿಸುವ ಕಾಲಕ್ಕೆ ದುರ್ನಡತೆ ಎಸಗಿರುವ ಕುರಿತಂತೆ ಶಿಸ್ತು ನಡವಳಿ ಜರುಗಿಸುವ ಬಗ್ಗೆ.

****

1. ಆರಕ್ಷಕ ಉಪಾಧೀಕ್ಷಕರು ಭ್ರಷ್ಟಾಚಾರ ನಿಗ್ರಹ ದಳ ಪೋಲಿಸ್ ಠಾಣೆ ವಿಜಯಪುರ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಇವರು ಸಲ್ಲಿಸಿದ ತನಿಖಾ ವರದಿ ಮತ್ತು ದಾಖಲೆಗಳನ್ನು ಪರಿಶೀಲಸಲಾಗಿ. 1) ಶ್ರೀ. ಮಹಮ್ಮದ್‌ಎಜಾಜ್ ಬಿನ್ ಬಿ.ಎ. ಅಬ್ದುಲ್ ರೆಹಮಾನ್, ಹಿರಿಯ ಮೋಟಾರು ವಾಹನ ನಿರೀಕ್ಷಕರು (ನಿವೃತ್ತ), ಜಳಕಿ ಆರ್.ಟಿ.ಓ. ಚೆಕ್‌ಪೋಸ್ಟ್, ವಿಜಯಪುರ ಜಿಲ್ಲೆ, 2) ಮುತ್ತುರಾಜ್ ಬಿನ್ ನಿಂಗಪ್ಪ, ಪ್ರಥಮ ದರ್ಜೆ ಸಹಾಯಕರು, ಜಳಕಿ ಆರ್.ಟಿ.ಓ. ಚೆಕ್‌ಪೋಸ್ಟ್, ವಿಜಯಪುರ ಜಿಲ್ಲೆ, 3) ಅಪ್ಪಾಸಾಹೇಬ್ ಬೋಜನಾಯಕ ಬಿನ್ ಹನುಮಂತ, ಸಿಪಾಯಿ ಜಳಕಿ ಆರ್.ಟಿ.ಓ. ಚೆಕ್‌ಪೋಸ್ಟ್, ವಿಜಯಪುರ ಜಿಲ್ಲೆ (ಮೃತಪಟ್ಟಿರುತ್ತಾರೆ) (ಇನ್ನು ಮುಂದೆ ಕ್ರಮವಾಗಿ ಎದುರುದಾರರು-1 & 2 ಎಂದು ಕರೆಯಲ್ಪಡುತ್ತಾರೆ) ಆದ ನಿಮ್ಮಗಳ ಮೇಲೆ ಶ್ರೀ. ಮಲ್ಲಯ್ಯ ಗಿರಿಮಲ್ಲಯ್ಯ ಮಠಪತಿ, ಪೋಲಿಸ್ ನಿರೀಕ್ಷಕರು, ಎಸಿಬಿ, ವಿಜಯಪುರ (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ). ಇವರು ದೂರು ಸಲ್ಲಿಸಿದ್ದು, ದೂರಿನಲ್ಲಿ

ಎದುರುದಾರರುಗಳಾದ ನೀವು ಜಳಕಿ ಚೆಕ್‌ಪೋಸ್ಟ್ ಮೂಲಕ ಹಾದುಹೋಗುವ ಸರಕುಸಾಗಣೆ ಮತ್ತು ಇತರೆ ವಾಹನಗಳ ಮಾಲೀಕರು / ಚಾಲಕರುಗಳಿಂದ ಅನಧಿಕೃತವಾಗಿ ಲಂಚ ವಸೂಲು ಮಾಡುತ್ತಿದ್ದೀರೆಂದು ಬರೆದುಕೊಂಡಿದ್ದು, ಸದರಿ ದೂರು ವಿಜಯಪುರ ಎ.ಸಿ.ಬಿ ಪೋಲಿಸ್ ಠಾಣಾ ಗುನ್ನಾ ನಂ. 03/2017 ರಲ್ಲಿ ದಿ: 02/03/2017ರಂದು ದಾಖಲಾಗಿದ್ದು, ತನಿಖಾಧಿಕಾರಿಗಳು ತನಿಖೆಯನ್ನು ಪೂರೈಸಿ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ ಕಲಂ 7, 8, 13(1)(ಡಿ) ರೆ/ವಿ 13(2) ಅಡಿಯಲ್ಲಿ ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ದೋಷರೋಪಣ ಪಟ್ಟಿಯನ್ನು ಪರಿಶೀಲಿಸಲಾಗಿ ಎದುರುದಾರರಾದ ನೀವು ಸರ್ಕಾರಿ ನೌಕರರಾಗಿ ಕರ್ತವ್ಯ ನಿರ್ವಹಿಸುವ ಕಾಲಕ್ಕೆ ಒಟ್ಟು 38,900/-ರೂ. ಹಣವನ್ನು ಲಂಚವಾಗಿ ಪಡೆದು ದುರ್ನಡತೆ ತೋರಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 7(1) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು-01 ಇವರು ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತಾರೆ.

2. **ಪ್ರಕರಣದ ಸಂಕ್ಷಿಪ್ತ ಸಾರಾಂಶ:-**

i. ದೂರುದಾರರಾದ **ಶ್ರೀ. ಮಲ್ಲಯ್ಯ ಗಿರಿಮಲ್ಲಯ್ಯ ಮಠಪತಿ, ಪೊಲೀಸ್ ನಿರೀಕ್ಷಕರು, ಎಸಿಬಿ, ವಿಜಯಪುರ** ಇವರು ದೂರು ಸಲ್ಲಿಸಿ, ಎದುರುದಾರರು ಜಳಕಿ ಚೆಕ್‌ಪೋಸ್ಟ್‌ನಲ್ಲಿ ಕರ್ತವ್ಯದಲ್ಲಿದ್ದಾಗ ಚೆಕ್‌ಪೋಸ್ಟ ಮೂಲಕ ಹಾದುಹೋಗುವ ಸರಕುಸಾಗಣೆ ಮತ್ತು ಇತರೆ ವಾಹನಗಳ ಮಾಲೀಕರು / ಚಾಲಕರುಗಳಿಂಧ ಅನಧಿಕೃತವಾಗಿ ಲಂಚ ವಸೂಲು ಮಾಡುತ್ತಿದ್ದೀರೆಂದು ಬರೆದುಕೊಂಡಿದ್ದು, ಸದರಿ ದೂರು ವಿಜಯಪುರ ಎ.ಸಿ.ಬಿ ಪೋಲಿಸ್ ಠಾಣಾ ಗುನ್ನಾ ನಂ. 03/2017 ರಲ್ಲಿ ದಿ: 02/03/2017 ರಂದು ದಾಖಲಾಗಿರುತ್ತದೆ. 1ನೇ ಎದುರುದಾರರು ಜಳಕಿ ಚೆಕ್‌ಪೋಸ್ಟ್‌ನಲ್ಲಿ ಹಿರಿಯ ಮೋಟಾರ್ ವಾಹನ ನಿರೀಕ್ಷಕರಾಗಿ, 2ನೇ ಎದುರುದಾರರು ಸದರಿ ಜಳಕಿ ಚೆಕ್‌ಪೋಸ್ಟ್‌ನಲ್ಲಿ ಪ್ರಥಮ ದರ್ಜೆ ಸಹಾಯಕನಾಗಿ ಹಾಗೂ 3ನೇ ಎದುರುದಾರರು ಸದರಿ ಚೆಕ್‌ಪೋಸ್ಟ್‌ನಲ್ಲಿ ಸಿಪಾಯಿಯಾಗಿ ಕೆಲಸ ಮಾಡುತ್ತಿದ್ದು ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ ಶರಣಬಸವ ಹಾಗೂ ಸಂತೋಷ್ ಕುಮಾರ್ ಇವರುಗಳನ್ನು ಬರಮಾಡಿಕೊಂಡು ದಿ: 06/03/2017 ರಂದು ರಾತ್ರಿ 10.45 ಗಂಟೆ ಸಮಯದಲ್ಲಿ ಎದುರುದಾರರು ಕರ್ತವ್ಯದ ಮೇಲಿದ್ದ ಜಳಕಿ ಚೆಕ್‌ಪೋಸ್ಟ್ ಬಳಿ ನಿಂತು ಗುಪ್ತವಾಗಿ ವಾಚ್ ಮಾಡಲಾಗಿ, 3ನೇ ಎದುರುದಾರರು ಮತ್ತು ಇನ್ನೊಬ್ಬ ಖಾಸಗಿ ವ್ಯಕ್ತಿಯಾದ ಪ್ರಕಾಶ್ ಕೋಳಿ ಇವರೊಂದಿಗೆ ಸೇರಿಕೊಂಡು ಚೆಕ್‌ಪೋಸ್ಟ್ ಮೂಲಕ ಹಾದುಹೋಗುವ ಸರಕುಸಾಗಾಣೆ ಹಾಗೂ ಇತರೆ ವಾಹನಗಳನ್ನು ಚೆಕ್ ಮಾಡುವ ನೆಪದಲ್ಲಿ ನಿಲ್ಲಿಸಿ, ಸದರಿ ವಾಹನಗಳ ಚಾಲಕರು / ಮಾಲೀಕರಿಂದ ಹಣವನ್ನು ಬೇಡಿ ಪಡೆದುಕೊಂಡು 1 ಮತ್ತು 2ನೇ ಎದುರುದಾರರಿಗೆ ನೀಡುತ್ತಿರುವುದು ಕಂಡು ಬಂದಿದ್ದು, ಜಳಕಿ ಚೆಕ್‌ಪೋಸ್ಟ್

ಮೇಲೆ ದಾಳಿ ಮಾಡಲಾಗಿ, 1ನೇ ಎದುರುದಾರರ ಕೊಠಡಿಯ ಕಿಟಿಕಿ ಹತ್ತಿರ ಇದ್ದ 25,300/- ರೂ. ಹಾಗೂ 2ನೇ ಎದುರುದಾರರ ಕೊಠಡಿಯಲ್ಲಿ 13,600/- ರೂ. ಹೀಗೆ ಒಟ್ಟು 38,900/- ರೂ.ಗಳು ದೊರೆತಿದ್ದು ಸದರಿ ಹಣವನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಆ ಕಾಲಕ್ಕೆ ಸಂಗ್ರಹಿಸಿದ ತೆರಿಗೆ ಹಣ 4,15,800/- ರೂ. ಅನ್ನು ವಾಹನ ನಿರೀಕ್ಷಕರಾದ ಡಿ.ಬಿ. ನಾಗರಾಜ್ ಇವರಿಗೆ ನೀಡಿ ರಶೀದಿ ಪಡೆದುಕೊಂಡಿರುತ್ತಾರೆ. ಸಂಬಂಧಪಟ್ಟ ದಾಖಲೆಗಳನ್ನು ಆರ್.ಟಿ.ಓ. ಕಛೇರಿ ಅಧೀಕ್ಷಕರಾದ ಶ್ರೀಧರ್ ಹೆಚ್. ಇವರಿಂದ ದೃಢೀಕರಿಸಿ ಅಮಾನತ್ತು ಪಡಿಸಿಕೊಂಡಿರುತ್ತಾರೆ. ಎದುರುದಾರರ ರಕ್ಷಣಾ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಸದರಿಯವರು ತಮಗೂ ಹಾಗೂ ದೊರೆತ ಹಣಕ್ಕೂ ಯಾವುದೇ ಸಂಬಂಧವಿಲ್ಲವೆಂದು ರಕ್ಷಣಾ ಹೇಳಿಕೆಯಲ್ಲಿ ಬರೆದುಕೊಂಡಿದ್ದಾರೆ. ಈ ಎಲ್ಲಾ ಪ್ರಕ್ರಿಯೆಗಳನ್ನು ದಿ: 06/03/2017 ರಂದು ಜಳಕಿ ಚೆಕ್‌ಪೋಸ್ಟ್‌ನಲ್ಲಿ ರಾತ್ರಿ 10.45 ರಿಂದ ದಿ:07/03/2017 ರ ಬೆಳಗಿನ ಝಾವ 5 ಗಂಟೆಯವರೆಗೆ ಬರೆದ ಮಹಜರ್‌ನಲ್ಲಿ ದಾಖಲಿಸಿಕೊಂಡಿರುತ್ತಾರೆ.

ದಿ: 07/03/2017 ರಂದು 1ನೇ ಎದುರುದಾರರು ವಾಸವಾಗಿರುವ ಕೆ.ಕೆ. ಕಾಲೋನಿಯಲ್ಲಿ 2ನೇ ಅಂತಸ್ತಿನಲ್ಲಿರುವ ಮನೆಗೆ ದಾಳಿ ಮಾಡಿ ತಪಾಸಣೆ ನಡೆಸಿದ್ದು ಗೃಹಉಪಯೋಗಿ ವಸ್ತುಗಳನ್ನು ಹೊರತುಪಡಿಸಿ, ಯಾವುದೇ ಹಣ ಅಥವಾ ಬೆಲೆ ಬಾಳುವ ವಸ್ತುಗಳು ದೊರೆತಿರುವುದಿಲ್ಲ.

2ನೇ ಎದುರುದಾರರು ವಾಸವಾಗಿರುವ ವಿಜಯಪುರ ನಗರದ ಕನಕದಾಸ ಬಡಾವಣೆಯಲ್ಲಿರುವ ಮನೆಯನ್ನು ಶೋಧನೆ ಮಾಡಲಾಗಿ ಗೃಹಉಪಯೋಗಿ ವಸ್ತುಗಳನ್ನು ಹೊರತುಪಡಿಸಿ, ಯಾವುದೇ ಹಣ ಅಥವಾ ಬೆಲೆ ಬಾಳುವ ವಸ್ತುಗಳು ದೊರೆತಿರುವುದಿಲ್ಲ.

ದಿ: 07/03/2017 ರಂದು ಜಳಕಿ ಚೆಕ್‌ಪೋಸ್ಟ್ ಹತ್ತಿರದಲ್ಲಿರುವ ಗೋಪಾಲ್ ಕಾಂಪ್ಲೆಕ್ಸನಲ್ಲಿರುವ ಇಂಡಿಯಾ ವಾಯು ಮಾಲಿನ್ಯ ತಪಾಸಣಾ ಕೇಂದ್ರಕ್ಕೆ ಬೆಳಗಿನ ಝಾವ 2.40 ರಿಂದ 3.40 ಗಂಟೆಗೆ ತಪಾಸಣೆ ಮಾಡಲು ಹೋಗಿದ್ದು ಅದು ಕ್ಲೋಸ್ ಆಗಿದ್ದರಿಂದ ಅದರ ಮಾಲೀಕರಾದ ಮಹಮ್ಮದ್‌ಅಲಿ ಇವರನ್ನು ಕರೆಯಿಸಿ, ಸದರಿಯವರ ಸಮಕ್ಷಮ ತಪಾಸಣೆ ಮಾಡಲಾಗಿ 23 ವಾಹನಗಳ ಮಾಲಿನ ತಪಾಸಣೆ ಶುಲ್ಕ 3,450/- ರೂ. ಹಾಗೂ ತಮ್ಮ ವೈಯುಕ್ತಕ ಹಣ 750/- ರೂ. ಹೊರತುಪಡಿಸಿ ಬೇರೆ ಯಾವುದೇ ಹಣ ದೊರೆತಿರುವುದಿಲ್ಲ.

ii) ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂಧಿಸಿದ ಪ್ರಮುಖ ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ. ಎದುರುದಾರರನ್ನು ಅಂದೇ ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಹಾಜರಪಡಿಸಿರುತ್ತಾರೆ.

3. ಮೇಲೆ ಹೇಳಿದ ಆಪಾದನೆಗಳ ಕುರಿತಂತೆ ಪರಿವೀಕ್ಷಣಾ ಟಿಪ್ಪಣಿಯನ್ನು 1 ಮತ್ತು 2ನೇ ಎದುರುದಾರರಿಗೆ ಜಾರಿ ಮಾಡಿದ್ದು, ಸದರಿಯವರು ತಮ್ಮ ಸಮಜಾಯಿಷಿಯನ್ನು ಸಲ್ಲಿಸಿರುತ್ತಾರೆ. **3ನೇ ಎದುರುದಾರರು ಮೃತಪಟ್ಟಿದ್ದರಿಂದ, ಸದರಿಯವರ ಮೇಲಿನ ನಡವಳಿಗಳನ್ನು ಪ್ಯಾರಾ-11 ರ ಆದೇಶದಂತೆ ಮುಕ್ತಾಯಗೊಳಿಸಲಾಗಿರುತ್ತದೆ.**

4. 1ನೇ ಎದುರುದಾರರಿಗೆ ಪರಿವೀಕ್ಷಣಾ ಟಿಪ್ಪಣಿಯನ್ನು ಜಾರಿ ಮಾಡಿದ್ದು, ಸದರಿಯವರು ತಮ್ಮ ಸಮಜಾಯಿಷಿಯಲ್ಲಿ ಬರೆದುಕೊಂಡಿರುವುದೇನೆಂದರೆ, ತಾನು ಸರ್ಕಾರಿ ಸೇವೆಯಿಂದ ನಿವೃತ್ತನಾಗಿದ್ದು, ತನ್ನ ಮೇಲೆ ಮಾಡಲಾದ ಎಲ್ಲಾ ಆಪಾದನೆಗಳು ಸುಳ್ಳು ಮತ್ತು ಆಧಾರ ರಹಿತವಾಗಿರುತ್ತವೆ. ತಾನು ಜಳಕಿ ಆರ್.ಟಿ.ಓ. ಚೆಕ್‌ಪೋಸ್ಟ್‌ನಲ್ಲಿ ಹಿರಿಯ ಮೋಟಾರ್ ವಾಹನ ನಿರೀಕ್ಷಕರಾಗಿ ಕೆಲಸ ಮಾಡುತ್ತಿದ್ದಾಗ ಅನಧಿಕೃತವಾಗಿ 38,900/- ರೂ. ಸಂಗ್ರಹಿಸಿರುವುದಿಲ್ಲವೆಂದು ಮತ್ತು ಪ್ರಾಮಾಣಿಕತೆಯಿಂದ ಕೆಲಸಮಾಡಿರುವುದಾಗಿ ಬರೆದುಕೊಂಡಿದ್ದಾರೆ. ತನ್ನ ಮೇಲೆ ಯಾವುದೇ ವಾಹನಗಳ ಮಾಲೀಕರು ದೂರು ಸಲ್ಲಿಸಿಲ್ಲವೆಂದು ಮತ್ತು ತನ್ನಿಂದ ತನಿಖಾಧಿಕಾರಿಗಳು ಯಾವುದೇ ಹಣವನ್ನು ಜಪ್ತಿ ಮಾಡಿಲ್ಲವೆಂದು ಮತ್ತು ಇದೊಂದು ನನ್ನ ವಿರುದ್ಧ ಸೃಷ್ಟಿಸಿದ ಪ್ರಕರಣವಾಗಿರುತ್ತದೆ ಎಂದು ಬರೆದುಕೊಂಡಿದ್ದಾರೆ. ಮುಂದುವರಿದು, ತನಗೆ ಇಂಡಿಯಾ ಎಮಿಷನ್ ಟೆಸ್ಟಿಂಗ್ ಸೆಂಟರ್ ಇದರ ಮಾಲೀಕರಾದ ಮಹಮ್ಮದ್ ಅಲಿ ಇವರ ಪರಿಚಯ ಇರುವುದಿಲ್ಲವೆಂದು ಮತ್ತು ಆತನ ಮೂಲಕ ಯಾವುದೇ ಲಂಚದ ಹಣ ಸಂಗ್ರಹಿಸಿಲ್ಲವೆಂದು ಮತ್ತು ದಿ: 07/03/2017ರಂದು ತನ್ನ ಮನೆಯನ್ನು ಪೋಲೀಸರು ಶೋಧನೆ ಮಾಡಿದ್ದು, ಮನೆಯಲ್ಲಿ ಯಾವುದೇ ಅಪರಾಧಿಕರಿಸುವ ವಸ್ತುಗಳು ದೊರೆತಿಲ್ಲವೆಂದು ನಿವೇದಿಸಿಕೊಂಡಿದ್ದಾರೆ. ತನಿಖಾಧಿಕಾರಿಗಳು 25,300/- ರೂ.ಗಳನ್ನು ದಾಳಿ ಕಾಲಕ್ಕೆ ಕಿಟಕಿಯಿಂದ ಅಮಾನತ್ತುಪಡಿಸಿಕೊಂಡಿದ್ದು, ತನಗೂ ಅದಕ್ಕೂ ಸಂಬಂಧವಿಲ್ಲವೆಂದು ತನ್ನ ಮೇಲೆ ಬಿಜಾಪುರ ನ್ಯಾಯಾಲಯದಲ್ಲಿ ಕ್ರಿಮಿನಲ್ ಮೊಕದ್ದಮೆ ವಿಚಾರಣೆಗೆ ಬಾಕಿ ಇದ್ದು, ತನ್ನ ಮೇಲಿನ ಯಾವುದೇ ಅಪಾದನೆಗಳು ರುಜುವಾತು ಆಗಿಲ್ಲವಾದ್ದರಿಂದ ಶಿಸ್ತು ನಡವಳಿಯನ್ನು ಪ್ರಾರಂಭಿಸುವುದು ಅಕಾಲಿಕ ಮತ್ತು ಅವಸರದ ಕ್ರಮವಾಗುತ್ತದೆ ಎಂದು ಮತ್ತು ವಿಚಾರಣೆಯನ್ನು ಕೈ ಬಿಡಬೇಕೆಂದು ನಿವೇದಿಸಿಕೊಂಡಿದ್ದಾರೆ.

5. 2ನೇ ಎದುರುದಾರರೂ ಸಹ 1ನೇ ಎದುರುದಾರರ ಸಮಜಾಯಿಷಿಯನ್ನು ಪುನರುಚ್ಚರಿಸುತ್ತಾ ತನ್ನ ವಶದಿಂದ ಯಾವುದೇ ಹಣವನ್ನು ತನಿಖಾಧಿಕಾರಿಗಳು ಅಮಾನತ್ತುಪಡಿಸಿಕೊಂಡಿರುವುದಿಲ್ಲ.

ದಿ: 07/03/2017 ರಂದು ತನ್ನ ಮನೆಯನ್ನು ಪೋಲೀಸರು ಶೋಧನೆ ಮಾಡಿದ್ದು, ಶೋಧನಾ ಕಾಲಕ್ಕೆ ಅಪರಾಧೀಕರಿಸುವ ಯಾವುದೇ ವಸ್ತುಗಳು ದೊರೆತಿರುವುದಿಲ್ಲ. ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿ ಇರುವ ಪ್ರಕರಣದಲ್ಲಿ ಯಾವುದೇ ಆಪಾದನೆಗಳು ರುಜುವಾತಾಗಿಲ್ಲವಾದ್ದರಿಂದ ಶಿಸ್ತು ನಡವಳಿಯನ್ನು ಪ್ರಾರಂಭಿಸುವುದು ಅಕಾಲಿಕ ಮತ್ತು ಅವಸರದ ಕ್ರಮವಾಗುತ್ತದೆ ಎಂದು ಮತ್ತು ವಿಚಾರಣೆಯನ್ನು ಕೈ ಬಿಡಬೇಕೆಂದು ನಿವೇದಿಸಿಕೊಂಡಿದ್ದಾರೆ.

6. ತನಿಖಾ ಕಾಲದಲ್ಲಿ ತನಿಖಾಧಿಕಾರಿಗಳು 1ನೇ ಎದುರುದಾರರು ಕುಳಿತುಕೊಳ್ಳುವ ಜಾಗದ ಪಕ್ಕದಲ್ಲಿದ್ದ ಕಿಟಕಿಯಿಂದ 25,300/- ರೂ. ಹಾಗೂ 2ನೇ ಎದುರುದಾರರ ಕೊಠಡಿಯಿಂದ 13,600/- ರೂ. ಹೀಗೆ ಒಟ್ಟು 38,900/- ರೂ.ಗಳನ್ನು ಜಪ್ತಿಮಾಡಿದ್ದು, ಸದರಿ ಹಣವು ಝಳಕಿ ಚೆಕ್‌ಪೋಸ್ಟ್ ಮೂಲಕ ಹೋಗುತ್ತಿದ್ದ ವಾಹನಗಳ ಮಾಲೀಕರಿಂದ / ಚಾಲಕರುಗಳಿಂದ ಅಕ್ರಮವಾಗಿ ಹಣವನ್ನು ಸಂಗ್ರಹಿಸಿರುವುದು ಮೇಲ್ನೋಟದಲ್ಲಿ ಕಂಡುಬರುತ್ತದೆ. ಎದುರುದಾರರು ಸದರಿ ಹಣದ ಬಗ್ಗೆ ಸಮಂಜಸವಾದ ಸಮಜಾಯಿಷಿಯನ್ನು ನೀಡಿರುವುದಿಲ್ಲ. ಪ್ರಕರಣದಲ್ಲಿ ಲಭ್ಯವಿರುವ ದಾಖಲೆಗಳನ್ನು ಹಾಗೂ ಸಾಕ್ಷ್ಯಾಧಾರಗಳನ್ನು ನಿರಾಕರಿಸಲು ಹಾಗೂ ಎದುರುದಾರರು ಸಲ್ಲಿಸಿದ ಆಕ್ಷೇಪಣೆಗಳನ್ನು ಒಪ್ಪಲು ಎಳ್ಳಷ್ಟೂ ಪುರಾವೆ ಇರುವುದಿಲ್ಲ. ಆದ್ದರಿಂದ ಮೇಲೆ ಹೇಳಿದಂತೆ ಎದುರುದಾರರು ಭ್ರಷ್ಟಾಚಾರವೆಸಗಿರುವುದು ಮೇಲ್ನೋಟದಲ್ಲಿ ಕಂಡುಬರುತ್ತದೆ.

7. ದೂರಿನಲ್ಲಿ ಮಾಡಿದ ಆಪಾದನೆ, ಸಾಕ್ಷಿದಾರರ ಹೇಳಿಕೆಗಳು ಹಾಗೂ ತನಿಖಾಧಿಕಾರಿ ತನಿಖಾ ಕಾಲದಲ್ಲಿ ಸಂಗ್ರಹಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ ಎದುರುದಾರರು ಕರ್ತವ್ಯದಲ್ಲಿ ಸಂಪೂರ್ಣ ನೀತಿ, ನಿಷ್ಠೆ ಹಾಗೂ ಶ್ರದ್ಧೆಯನ್ನು ತೋರಿಸದೆ, ಮೇಲ್ಕಂಡಂತೆ ಭ್ರಷ್ಟಾಚಾರವೆಸಗಿ ಸರ್ಕಾರಿ/ಸಾರ್ವಜನಿಕ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಎದುರುದಾರರು ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು 1966 ನಿಯಮ 3(1)(i) ರಿಂದ (iv) ಅನ್ವಯ ಶಿಸ್ತುಕ್ರಮಕ್ಕೆ ಒಳಪಡಲು ಭಾಧ್ಯರಾಗಿರುತ್ತಾರೆ. ಆದ್ದರಿಂದ ಎದುರುದಾರರು ಎಸಗಿದ ದುರ್ನಡತೆಗೆ ಇಲಾಖಾ ವಿಚಾರಣೆ ನಡೆಸುವುದು ಅತೀ ಅವಶ್ಯವಿರುತ್ತದೆ.

8. 1ನೇ ಎದುರುದಾರರು ಮೇ 2017 ರಲ್ಲಿ ನಿವೃತ್ತಿ ಹೊಂದಿರುತ್ತಾರೆ. ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂ.19386/2016 ರಲ್ಲಿ ಆದ ಆದೇಶದನ್ವಯ ತನಿಖಾಧಿಕಾರಿಗಳು ದಿ: 20/03/2021 ರಂದು ಈ ಪ್ರಕರಣದ ದೋಷಾರೋಪಣ ಪಟ್ಟಿಯನ್ನು ಈ ಪ್ರಾಧಿಕಾರಕ್ಕೆ ಮುಂದಿನ ಕ್ರಮಕ್ಕೆ ಕಳುಹಿಸಿದ್ದಾರೆ. ಮೇಲೆ ಹೇಳಿದ ರಿಟ್ ಅರ್ಜಿ ನ್ಯಾಯಾಲಯದಲ್ಲಿ ಪೆಂಡಿಂಗ್ ಇದ್ದ ಅವಧಿಯನ್ನು ವಜಾ ಮಾಡಿದಲ್ಲಿ ಕೆ.ಸಿ.ಎಸ್.ಆರ್. ನಿಯಮ 214 ರಲ್ಲಿ ಹೇಳಿದ 4ವರ್ಷ

ಕಾಲಮಿತಿಯ ಒಳಗೆ ಶಿಸ್ತು ನಡವಳಿಯನ್ನು ಪ್ರಾರಂಭಿಸಿದಂತಾಗುತ್ತದೆ. ಆದ್ದರಿಂದ, 214(2)(ಬಿ)(i) ಕೆ.ಸಿ.ಎಸ್.ಆರ್. ಅಡಿಯಲ್ಲಿ ಶಿಸ್ತು ನಡವಳಿ ಪ್ರಾರಂಭಿಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಸಕ್ಷಮ ಪ್ರಾಧಿಕಾರವಾದ ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯಿದೆ 12(3) ರಲ್ಲಿ ಪ್ರದತ್ತವಾದ ಅಧಿಕಾರದ ಅಡಿ ಶಿಫಾರಸ್ಸು ಮಾಡಲಾಗಿದೆ.

9. ಅದೇ ಪ್ರಕಾರ 2ನೇ ಎದುರುದಾರರ ವಿರುದ್ಧ ಶಿಸ್ತು ನಡವಳಿಕೆಗಳನ್ನು ಪ್ರಾರಂಭಿಸಲು ಮತ್ತು ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿರ್ಭಂಧ ಮತ್ತು ಮೇಲ್ಮನವಿ) ನಿಯಮಗಳು 1957, ನಿಯಮ 14(ಎ) ಅಡಿಯಲ್ಲಿ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರಲ್ಲಿ ಪ್ರದತ್ತವಾದ ಅಧಿಕಾರದ ಅಡಿ ಸಕ್ಷಮ ಪ್ರಾಧಿಕಾರವಾದ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(4) ಪ್ರಕಾರ ಶಿಸ್ತು ಪ್ರಾಧಿಕಾರವು ಈ ವರದಿಯ ಅನ್ವಯ 1 ಮತ್ತು 2 ನೇ ಎದುರುದಾರರಗಳ ವಿರುದ್ಧ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಮೂರು (3) ತಿಂಗಳ ಒಳಗಾಗಿ ಈ ಪ್ರಾಧಿಕಾರಕ್ಕೆ ತಿಳಿಸುವುದು.

16/12/21

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.